ಅವನ ಹಿನ್ನೆಲೆಯೂ ಕುತೂಹಲಕಾರಿ. ಕಡು ಬಡತನದ ದೆಸೆಯಿಂದಾಗಿ, ಹೊನ್ನಜ್ಜಿಯ ಮಗ ಅಂದರೆ ಜಯರಾಮನ ತಂದೆ ನರಸಿಂಹಯ್ಯನನ್ನು ದತ್ತಕ್ಕೆ ಕೊಡಬೇಕಾದ ಪ್ರಸಂಗ ಬರುತ್ತದೆ. ಹೆಸರುಗದ್ದೆಯ ಶ್ರೀಮಂತ ಕುಟುಂಬದಲ್ಲಿ ಬೆಳೆದ ನರಸಿಂಹಯ್ಯನವರಿಗೆ ವ್ಯವಹಾರ ಕುಶಲತೆಯೊಂದಿಗೆ ಬೇಕಾದ ಅನುಕೂಲವೆಲ್ಲಾ ದೊರಕಿತ್ತು. ಆಧುನಿಕ ವಿದ್ಯಾಭ್ಯಾಸ, ಶಿವಮೊಗ್ಗ-ಬೆಂಗಳೂರು ಊರುಗಳ ನಗರ ಜೀವನದ ಪರಿಚಯವೂ ಆಗಿ ತಮ್ಮ ಮಕ್ಕಳಾದ ಶ್ರೀರಾಮ, ಜಯರಾಮರಿಗೆ ಶಿವಮೊಗ್ಗದಲ್ಲಿ ಮನೆ ಮಾಡಿ ಓದಲು ಅನುಕೂಲ ಮಾಡಿಕೊಟ್ಟಿರುತ್ತಾರೆ. ಇಬ್ಬರೂ ಬುದ್ಧಿವಂತರಾಗಿ ಬೆಳೆದು ಶ್ರೀರಾಮ ಪ್ರಾಣಿಶಾಸ್ತ್ರದಲ್ಲೂ, ಜಯರಾಮ ತತ್ವಶಾಸ್ತ್ರದಲ್ಲೂ ಆಸಕ್ತಿ ಹೊಂದಿ ಹೆಚ್ಚಿನ ಅಧ್ಯಯನ ಮಾಡಲು ಬಯಸುತ್ತಾರೆ. ಮನೆಕಡೆ ಬಂದು ತೋಟದಲ್ಲಿ ಸುತ್ತಾಡುವಾಗಲೂ ಶ್ರೀರಾಮ, ಸದಾಕಾಲ ಕೀಟಗಳ ಬಗ್ಗೆಯೇ ಆಲೋಚಿಸಿದರೆ, ಜಯರಾಮ ತರ್ಕದಲ್ಲಿ ಹೆಚ್ಚು ಆಸಕ್ತ. ಮೊದಲಿನಿಂದಲೂ ತನಗೆ ಕಂಡದ್ದನ್ನು ನೇರವಾಗಿ ಮಾತನಾಡುತ್ತ ಸಂವಾದಕ್ಕೆ ಸದಾ ಸಿದ್ಧನಾಗಿರುವವನು. ಲೋಕರೂಢಿಯ ಯಾವ ಮುಲಾಜಿಗೂ ಸಿಲುಕದೆ, ಸರಿಯೆನಿಸಿದ್ದನ್ನು ಮಾಡುವಲ್ಲಿ ಸ್ವಲ್ಪವೂ ಹಿಂಜರಿಯುವವನಲ್ಲ. ಜೀವ, ಆತ್ಮ, ಪುನರ್ಜನ್ಮ, ಸ್ವರ್ಗ ನರಕ ಇತ್ಯಾದಿಗಳ ಬಗ್ಗೆ ಮಾತ್ರವಲ್ಲದೆ, ಪ್ರತಿದಿನವೂ ತನಗೆ ತೋಚಿದ್ದನ್ನು ಬರೆದಿಡುವ ಅವನ ದಿನಚರಿ ಪುಸ್ತಕದಲ್ಲಿ ಜಾತಿ, ವರ್ಣಸಂಕರ, ಹೆಣ್ಣು-ಗಂಡು ಭೇದ, ಒಬ್ಬ ವೇಶ್ಯೆಯ ಸಾಮಾಜಿಕ ಸ್ಥಾನದಂತಹ ಹಲವು ವಿಷಯಗಳು ಅಡಕವಾಗಿರುತ್ತವೆ. ವೇಶ್ಯಾ ಸ್ತ್ರೀ ಬಗ್ಗೆ ಆತ ಬರೆದ ಲೇಖನ ಪತ್ರಿಕೆಯಲ್ಲಿ ಪ್ರಕಟವಾಗಿ ಹಲವು ಬಗೆಯ ಪ್ರತಿಕ್ರಿಯೆಗಳನ್ನು ಎದುರಿಸಬೇಕಾಗುತ್ತದೆ. ಲೇಖಕರೇ ಬರೆಯುವಂತೆ 'ಜಯರಾಮನಿಗೋ ತನ್ನ ಜೀವನವನ್ನು ಸಮಕಾಲೀನ ಪ್ರಜ್ಞೆಯಿಂದ ತುಂಬಿಸಿಕೊಳ್ಳಬೇಕೆಂಬ ಹಂಬಲ. ಈ ತನಕ ಅವನಿಗೆ ದೊರಕಿರುವ ಸಾಮಗ್ರಿಗಳೆಂದರೆ ಮನಶ್ಶಾಸ್ತ್ರ, ಸಮಾಜ ಶಾಸ್ತ್ರ, ತತ್ವಜ್ಞಾನದಂತಹ ನಾಲ್ಕಾರು ವಿಷಯಗಳು'.

ಹೊನ್ನಜ್ಜಿಯೊಂದಿಗಿನ ತನ್ನ ಮೊದಲ ಭೇಟಿಯಲ್ಲೇ ತನ್ನ ಅಜ್ಜಿ ಪದ್ಮಾವತಿ, ಹೊನ್ನಜ್ಜಿಯನ್ನು ಕುರಿತು ನೆನಪಿಸಿಕೊಂಡು ಒಂದು ಮಾತು ಹೇಳುತ್ತಾರೆ: 'ನಮ್ಮ ಅತ್ತೆಗೆ ಇಚ್ಛಾಮರಣ ಬಂದಿತಲ್ಲಾ, ಅವರ ಪುಣ್ಯ ನಮಗೆ ಬಂದೀತೇ, ನಾವು ಬದುಕಿನಲ್ಲಿ ಎಷ್ಟು ಪಾಪ ಮಾಡಿದ್ದೇವೆಯೋ'. ಇದನ್ನು ಕೇಳಿದ ಜಯರಾಮ, 'ಅಜ್ಜಿ ನಿಮ್ಮ ದುಃಖ, ಸಂಕಟ ಇನ್ನೊಬ್ಬರ ಮಾತನ್ನು ನಂಬಿಯೇ ಬಂದದ್ದು, ಯೋಚಿಸಿದರೆ ನಿಮಗೇ ಅದು ಗೊತ್ತಾದೀತು' ಎಂದು ಬಿಡುತ್ತಾನೆ ಕಡಕ್ ಆಗಿ.

ಇನ್ನೊಂದು ಸಂದರ್ಭದಲ್ಲಿ ಶೃಂಗೇರಿ ಶಾರದಾಂಬೆಯ ದರ್ಶನ ಮಾಡುವ ಸಂದರ್ಭದಲ್ಲಿ ತಾಯಿ 'ಒಳ್ಳೆ ಬುದ್ಧಿ ಕೊಡು ಎಂದು ಬೇಡಿಕೋ' ಎಂದಾಗ 'ವಿದ್ಯೆ, ಬುದ್ಧಿಯನ್ನೇ' ಎಂದು ಸಟ್ಟನೇ ಕೇಳಿದ ಜಯರಾಮ, ಮುಂದೆ ಮಾತನಾಡುತ್ತಾ ತಾಯಿಯೊಂದಿಗೆ ತನಗೆ ದೇವರ ಬಳಿ ಏನನ್ನೂ ಬೇಡಬೇಕು ಎನಿಸಲಿಲ್ಲ, ದೇವರು ಅಂತ ಒಬ್ಬ ಇದ್ದರೆ, ಅವನು ಬುದ್ಧಿ ಕೊಡದೆ ನಮ್ಮನ್ನು ಹುಟ್ಟಿಸಿದ್ದಾನೆಯೇ, ಕೊಟ್ಟ ಬುದ್ಧಿ ಉಪಯೋಗಿಸಲಿಕ್ಕೆ ಬಾರದೆ 'ಕೊಡು ಕೊಡು' ಎಂದು ಬೇಡುವವರಿಗೆ ಯಾರೂ ಏನನ್ನೂ ಕೊಡಲಾರರು ಎನ್ನುತ್ತಾನೆ.

ಇನ್ನೊಂದು ಬಾರಿ ಹಗಲು ಹೊತ್ತಿನಲ್ಲಿ ಆಲದ ಮರದ ಬುಡದಲ್ಲಿ ಏನನ್ನೋ ಧ್ಯಾನಿಸುತ್ತಾ ಮಲಗಿದ ಜಯರಾಮನ ಬಳಿ ಅವಧಾನಿಗಳೊಬ್ಬರು ಬರುತ್ತಾರೆ. ಅವರೊಂದಿಗೆ, ಆಲದ ಮರದ ಕುರಿತ 'ಆದಿ, ಅನಾದಿ'ಗಳ ಬಗ್ಗೆ ಸುದೀರ್ಘವಾದ ಚರ್ಚೆ ನಡೆಯುತ್ತದೆ. ಇಂತಹ ಹಲವಾರು ಸಂದರ್ಭದಲ್ಲಿ ತನ್ನ ಮಾತುಕತೆ-ನಡವಳಿಕೆಯ ಮೂಲಕ ತಾನು 'ನಾಸ್ತಿಕ' ಎಂಬ ಭಾವನೆಗೆ ಈಡು ಮಾಡಿಕೊಂಡ ಜಯರಾಮ, ತನ್ನ ಅಣ್ಣ ಬೇರೆ ಜಾತಿಗೆ ಸೇರಿದ ಚಂಪೆ ಎಂಬ ಹುಡುಗಿಯನ್ನು ಇಷ್ಟಪಟ್ಟಿರುವುದನ್ನು ತಿಳಿದಾಗ, ಅದು ಅತ್ಯಂತ ಸಹಜವೆಂಬಂತೆ ಪ್ರತಿಕ್ರಿಯಿಸುತ್ತಾನೆ. ತಾನು ಅಣ್ಣ ಹಾಗೂ ಹೆತ್ತವರ ಮಧ್ಯೆ ಬೆಂಬಲದ ಸೇತುವಾಗಿ ನಿಲ್ಲುತ್ತಾನೆ.

ಮುಂದೆ ಇದೇ ಚಿಂತೆಯಲ್ಲಿ ತಾಯಿ ಹಾಸಿಗೆ ಹಿಡಿದಾಗಲೂ ತಮ್ಮ ಅಜ್ಜ ದಾಶರಥಯ್ಯನವರನ್ನು, ಕಮ್ಮರಡಿಯಿಂದ ತೊಟ್ಟಿಲುಬಯಲಿಗೆ ಎತ್ತಿನ ಗಾಡಿಯಲ್ಲಿ ಕರೆತರುತ್ತಾನೆ. 'ಮಕ್ಕಳು ತಮ್ಮ ಋಣ ತೀರಿಸಲಿಕ್ಕೆ ಕಾಲಬುಡದಲ್ಲೇ ಇರಬೇಕೆಂದು ಬಯಸುವುದು ತಪ್ಪು, ಸತ್ತ ಮೇಲೆ ಯಾರೊಬ್ಬರಿಗೂ ಪಿಂಡ ಬಾಕಿಯಾಗುವುದಿಲ್ಲ, ಅದೆಲ್ಲ ಒಂದು ನಂಬಿಕೆ, ಭ್ರಮೆ' ಎನ್ನುವ ಮಾತುಗಳನ್ನು ಅವರಿಂದ ಹೇಳಿಸುತ್ತಾನೆ